**1ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ**

**ಸಿ.ಸಿ ಸಂಖ್ಯೆ: 82/2025**

**ಸಿ.ಡಬ್ಲ್ಯೂ -1, ಪಿ.ಡಬ್ಲ್ಯೂ -1**

| | | |
|---|---|---|
| ಸಾಕ್ಷಿದಾರರ ಹೆಸರು | : | ಪಲ್ಲವಿ |
| ಗಂಡನ ಹೆಸರು | : | ರಾಕೇಶ್ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ | : | ಶಿವಮೊಗ್ಗ |

**ಪ್ರಮಾಣೀಕರಿಸಿದ ದಿನಾಂಕ : 23.06.2026.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

1. ಚಾಸ 2 ನನ್ನ ಅತ್ತೆ. ಚಾಸ 3 ನನ್ನ ಅತ್ತೆಯ ಮಗ. ಚಾಸ 4 ನನ್ನ ದೊಡ್ಡಪ್ಪ. ಚಾಸ 5 ರಿಂದ 10 ರವರ ಪರಿಚಯವಿರುತ್ತದೆ, ಅವರು ನಮ್ಮ ಊರಿನವರೇ. ಆರೋಪಿಯ ಪರಿಚಯವಿದೆ. 2022 ರಲ್ಲಿ ನನ್ನ ಅತ್ತೆ ಚಾಸ 2 ರವರ ಮೊಬೈಲ್ ಗೆ ಆರೋಪಿಯ ವಿವಾಹದ ಪ್ರಸ್ತಾವನೆ ಬಂತು. ಪ್ರಸ್ತಾವನೆ ಬಂದ ನಂತರ ನನ್ನ ಅತ್ತೆ ಮತ್ತು ಮಾವ ಇಬ್ಬರೂ ಆರೋಪಿಯನ್ನು ಮನೆಗೆ ಕರೆಯಿಸಿ ಮಾತುಕತೆ ಮಾಡಿದರು. ನನ್ನ ವಿವಾಹವನ್ನು ಆರೋಪಿಯೊಂದಿಗೆ ಮಾಡಲು ಮಾತುಕತೆ ಆಯಿತು. ಆರೋಪಿಯ ಸಂಬಂಧ ನಮ್ಮ ಮನೆಯಲ್ಲಿ ಎಲ್ಲರಿಗೂ ಇಷ್ಟವಾಯಿತು.

2. ಮದುವೆಗೆ ನಮ್ಮ ಮನೆಯವರು ಒಪ್ಪಿದ ನಂತರ ಆರೋಪಿ ಈಗಾಗಲೇ ಮದುವೆಯಾಗಿ ವಿಚ್ಛೇದನ ಪಡೆದಿರುವ ವಿಷಯ ಹಾಗೂ ಆತನ ನಡತೆ ಸರಿ ಇಲ್ಲವೆಂಬ ವಿಷಯ ನಮ್ಮ ಮನೆಯವರಿಗೆ ತಿಳಿಯಿತು. ನಂತರ ನಮ್ಮ ಮನೆಯವರು ಮದುವೆ ಮಾಡುವುದು ಬೇಡ ಎಂದು ನಿರ್ಧಾರ ಮಾಡಿದರು. ಈ ವಿಷಯವನ್ನು ನಾವು ಆರೋಪಿಗೆ ತಿಳಿಸಿ ಮದುವೆ ವಿಷಯದಲ್ಲಿ ಮುಂದುವರೆಯುವುದು ಬೇಡ ಎಂದು ಹೇಳಿದ್ದೆವು.

ದಿ:14.04.2023 ರಂದು ಸಂಜೆ 5.30 ರ ಸಮಯಕ್ಕೆ ಚಾಸ 2 ರವರ ಮನೆಗೆ ಬಂದರು. ಆ ಸಮಯದಲ್ಲಿ ನನ್ನ ದೊಡ್ಡಪ್ಪ ಚಾಸ 4 ಮನೆಯಲ್ಲಿಯೇ ಇದ್ದರು. ಚಾಸ 4 ಆರೋಪಿಗೆ ಕುಳಿತುಕೊಳ್ಳಿ ನೀರು ಕುಡಿಯುತ್ತೀರಾ ಎಂದು ಕೇಳಿದಾಗ ಆರೋಪಿ ನೇರವಾಗಿ ನಾನು ನಿಮ್ಮನ್ನು ಕೇಳಲಿಲ್ಲ ಎಂದು ಹೇಳಿ ಚಾಸ 4 ರವರ ಕುತ್ತಿಗೆಯನ್ನು ಹಿಡಿದು ದೂಡಿದರು. ಆಗ ಚಾಸ 2 ರವರು ಬಿಡಿಸಲು ಹೋದಾಗ ಅವರ ನೈಟಿಯನ್ನು ಹಿಡಿದು ಹರಿದು ಹಾಕಿ ಚಾಸ 2 ರವರನ್ನು ದೂಡಿ ಬೀಳಿಸಿದರು. ನಾನು ಸಹ ಅಲ್ಲೇ ಇದ್ದೆ. ನಾನು ಮತ್ತು ನನ್ನ ತಂಗಿ ಬಿಡಿಸಲು ಹೋದಾಗ ನಮ್ಮನ್ನು ಸಹ ದೂಡಿ ಬೀಳಿಸಿದರು. ಅಕ್ಕಪಕ್ಕದವರು ಬಂದು ಜಗಳವನ್ನು ಬಿಡಿಸಿದರು. ನಾವು ಈ ಸಂಬಂಧ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದೆವು.

3. ಮರುದಿನ ದಿ:16.04.2023 ರಂದು ನಮ್ಮ ಅಂದವಳ್ಳಿ ಗ್ರಾಮದ ಎಲ್ಲಾ ಮನೆಗಳಿಗೂ ನನ್ನ ಮತ್ತು ಆರೋಪಿಯ ಭಾವಚಿತ್ರವಿರುವ ಕರಪತ್ರವನ್ನು ಮುದ್ರಿಸಿ ಕರ ಪತ್ರದ ಹಿಂದೆ ನನಗೂ ಇಷ್ಟ ಇತ್ತು, ಅವಳಿಗೂ ಇಷ್ಟ ಇತ್ತು, ಆದರೆ ಮದುವೆ ಮಾಡಿಕೊಡುತ್ತಿಲ್ಲವೆಂದು ಮುದ್ರಿಸಿ ಆರೋಪಿ ಎಲ್ಲಾ ಮನೆಗಳಿಗೂ ಹಂಚಿದ್ದರು. ಮರುದಿನ ನನ್ನ ದೊಡ್ಡಪ್ಪ ಚಾಸ 4 ರವರಿಗೆ ಸದರಿ ಕರಪತ್ರ ಸಿಕ್ಕಿತು. ನಂತರ ನಾವು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದೆವು. ದಿ:19..04.2023 ರಂದು ಪೊಲೀಸರು ನಮ್ಮನ್ನು ಮತ್ತು ಆರೋಪಿಯನ್ನು ಕರೆಸಿ ಮುಚ್ಚಳಿಕೆಯನ್ನು ಬರೆಸಿಕೊಂಡರು.

4. ದಿ22.05.2023 ರಂದು ಆರೋಪಿ ಅಂದವಳ್ಳಿ ಗ್ರಾಮದ ಬಸ್ ನಿಲ್ದಾಣ ಹಾಗೂ ಊರಿನ ಒಳಗಿನ ವಿದ್ಯುತ್ ಕಂಬಕ್ಕೆ ನನ್ನ ಹಾಗೂ ಆರೋಪಿಯ ಭಾವಚಿತ್ರ ಇರುವ ಪ್ಲೆಕ್ಸ್ ಅನ್ನು ಹಾಕಿ ಅದರಲ್ಲಿ ವಿವಾಹ ಎಂದು ಬರೆಯಲಾಗಿತ್ತು. ದಿ:14.08.2023 ರಂದು ಅಂದವಳ್ಳಿ ಗ್ರಾಮದ ನಮ್ಮ ಮನೆಯ ವಿಳಾಸಕ್ಕೆ ಮಹಿಳಾ ಸಾಂತ್ವನ ಕೇಂದ್ರ ಎಂಬ ಹೆಸರಿನಿಂದ ಒಂದು ಪತ್ರ ಬಂದಿತ್ತು. ಅದನ್ನು ತೆರೆದು ನೋಡಿದಾಗ ಅದರಲ್ಲಿ ಹೆದರಬೇಡ, ನಾನಿದ್ದೇನೆ, ನಂಬಿದವರನ್ನು ನಾನು ಕೈ ಬಿಡುವುದಿಲ್ಲವೆಂದು ಬರೆಯಲಾಗಿತ್ತು. ಅದನ್ನು ಸಹ ಆರೋಪಿಯೇ ಬರೆದಿದ್ದಾನೆಂದು ಗೊತ್ತಾಯಿತು.

5. ದಿಃ22.08.2023 ರಂದು ಸಾಗರ ತಾಲ್ಲೂಕಿನ ಕುಲ್ಲತ್ತಿ ಗ್ರಾಮದ ಚಾಸ 2 ರವರ ವಿಳಾಸಕ್ಕೆ ಒಂದು ಪತ್ರ ಬಂದಿತ್ತು. ಆ ಪತ್ರದಲ್ಲಿ ಊರಿನ ಗ್ರಾಮಸ್ಥರು ಎಂದು ಬರೆಯಲಾಗಿತ್ತು. ಆ ಪತ್ರದಲ್ಲಿ ಏನು ಬರೆದಿತ್ತು ಎಂದು ನನಗೆ ಈಗ ನೆನಪಿಲ್ಲ.

**ಮಾನ್ಯ ಸ.ಸ.ಅ. ರವರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)**
**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.**